ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ದಿನಾಂಕ: 18-07-2014

# ಪೀಠಿಕೆ

## ➢ ಕಾರ್ಯಕ್ರಮದ ಸ್ವರೂಪ:

ಕಾಲೇಜು ಶಿಕ್ಷಣ ಇಲಾಖೆಯು IIT ಮುಂಬೈರವರ ಸಹಭಾಗಿತ್ವದೊಂದಿಗೆ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ವಿದ್ಯಾರ್ಥಿಗಳಿಗೆ ಹಾಗೂ ಅಧ್ಯಾಪಕರಿಗೆ ಕಂಪ್ಯೂಟರ್ ಪ್ರೋಗ್ರಾಮಿಂಗ್ (Computer Programming) / ಐಟಿ ಕೌಶಲ್ಯ (IT Skills) / ಕಂಪ್ಯೂಟರ್‌ನ ಪ್ರಾಥಮಿಕ ಬಳಕೆ (Computer Fundamentals) ಗಳಲ್ಲಿ ದೂರ ಶಿಕ್ಷಣ ನೀಡಲು **"ಸ್ಪೋಕನ್ ಟ್ಯುಟೋರಿಯಲ್"** (Spoken Tutorials) ಎನ್ನುವ ಹೊಸ ಕಾರ್ಯಕ್ರಮವನ್ನು ಜಾರಿಗೊಳಿಸಲು ಉದ್ದೇಶಿಸಿದೆ. ಇದೊಂದು ವಿನೂತನ ಕಾರ್ಯಕ್ರಮವಾಗಿದ್ದು, ಶ್ರೇಷ್ಠ ಆಡಿಯೋ-ವಿಡಿಯೋಗಳ ನೆರವಿನಿಂದ ಕಂಪ್ಯೂಟರ್ ಬಳಕೆಯನ್ನು ವಿವಿಧ ಹಂತಗಳಲ್ಲಿ ಉಚಿತವಾಗಿ ಕಲಿಯಬಹುದಾಗಿದೆ. ಇದು ವಿಶೇಷವಾಗಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯವು (MHRD) ರೂಪಿಸಿರುವ ಕಾರ್ಯಕ್ರಮವಾಗಿದ್ದು, ಇದರಲ್ಲಿ ಬಳಸಲಾಗುವ ಕಲಿಕೆಯ ಸಾಮಗ್ರಿ ಮತ್ತು ತಂತ್ರಾಂಶಗಳನ್ನು IIT ಮುಂಬೈ ಸಿದ್ಧಪಡಿಸಿದೆ. ಈ ಸ್ಪೋಕನ್ ಟ್ಯುಟೋರಿಯಲ್ ಮೂಲಕ Free and Open Source Software (FOSS) ಕಲಿಯಬಹುದಾದ ವಿವಿಧ ಕೋರ್ಸ್‌ಗಳೆಂದರೆ, ಲಿನಕ್ಸ್-ಉಬಂಟು (Linux-Ubuntu), ಲಿಬ್ರೆ ಆಫೀಸ್ (Libre Office), ರೈಟರ್ (Writer), ಕ್ಯಾಲ್ಕ್ (Calc), ಇಂಪ್ರೆಸ್ (Impress), ಬೇಸ್ (Base), ಡ್ರಾ (Draw), ಮ್ಯಾಥ್ (Math), PHP, MySQL, C/C++, Java, Netbeans, Python ಮತ್ತು ಸೈಲ್ಯಾಬ್ (Scilab).

## ➢ ಕಾರ್ಯಕ್ರಮದ ಉದ್ದೇಶ:

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ವಿವಿಧ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಸ್ಪೋಕನ್ ಟ್ಯುಟೋರಿಯಲ್ ಮುಖಾಂತರ ಉಚಿತವಾಗಿ ಈ ಕೆಳಕಂಡ ತರಬೇತಿಯನ್ನು ಪಡೆಯಬಹುದು.

- BCA, B.Sc ವಿದ್ಯಾರ್ಥಿಗಳು – C/C++, Java, Linux, Math, Python, Scilab, Calc.
- B.Com/BBM, BA (Journalism) ಮತ್ತು ಇತರೆ ವಿದ್ಯಾರ್ಥಿಗಳು – LibreOffice, Calc, Writer, PHP, MySQL, Impress, Draw & others.

ಈ ಕೋರ್ಸುಗಳು ವಿಶ್ವವಿದ್ಯಾಲಯದ ಪಠ್ಯಕ್ರಮಕ್ಕೆ ಪೂರಕವಾಗಿದ್ದು, ವಿದ್ಯಾರ್ಥಿಗಳಿಗೆ ಈ ಕಲಿಕೆಯು ಪ್ರಯೋಜನಕಾರಿಯಾಗುವುದು. ಉದ್ಯೋಗಾರ್ಹತೆಯನ್ನು ಗಣನೀಯವಾಗಿ ಹೆಚ್ಚಿಸಿ, ಸರ್ಕಾರಿ ಮತ್ತು ಖಾಸಗಿ ವಲಯಗಳ ಉದ್ಯೋಗಗಳಿಗೆ ಕೌಶಲ್ಯಯುತ ಅಭ್ಯರ್ಥಿಗಳನ್ನು ಒದಗಿಸುವಲ್ಲಿ ನೆರವಾಗುವುದು.

## ➢ ಕಾರ್ಯಕ್ರಮದ ನಿರ್ವಹಣೆ:

ಈ ಕಾರ್ಯಕ್ರಮದ ಪ್ರಯೋಜನವನ್ನು ಕಾಲೇಜುಗಳು ಪಡೆದುಕೊಳ್ಳಲು ಕೆಳಕಂಡ ಸೂಚನೆಗಳನ್ನು ಅನುಸರಿಸಬೇಕಾಗಿದೆ:

1. ಪ್ರತಿಯೊಂದು ಕಾಲೇಜಿನಲ್ಲೂ ಸ್ಪೋಕನ್ ಟ್ಯುಟೋರಿಯಲ್‌ಗಾಗಿ ಒಬ್ಬರು ಅಧ್ಯಾಪಕರನ್ನು ಕಾರ್ಯಕ್ರಮ ಸಂಯೋಜಕರನ್ನಾಗಿ ನೇಮಿಸಿ, ಅವರ ಹೆಸರು, ವಿಳಾಸ, ಇ-ಮೇಲ್ ವಿಳಾಸ ಹಾಗೂ ಮೊಬೈಲ್ ಸಂಖ್ಯೆಗಳನ್ನು ಸಂಬಂಧಪಟ್ಟ ಪ್ರದೇಶವಾರು ಜಂಟಿ ನಿರ್ದೇಶಕರ ಕಛೇರಿಗೆ ಮತ್ತು ಕೇಂದ್ರ ಕಛೇರಿಯ ವಿಶೇಷ ಯೋಜನೆ ವಿಭಾಗಕ್ಕೆ ಸಲ್ಲಿಸಬೇಕು. ಈ ಕಾರ್ಯಕ್ರಮ ಸಂಯೋಜಕರು ತಮ್ಮ ಕಾಲೇಜು, IIT ಮುಂಬೈ, ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ ಮತ್ತು ಕೇಂದ್ರ ಕಛೇರಿಗಳ ನಡುವೆ ಸಂಪರ್ಕವನ್ನು ಸೃಜಿಸಿ, ಕಾರ್ಯಕ್ರಮದ ಅನುಷ್ಠಾನದಲ್ಲಿ ಪ್ರಧಾನ ಪಾತ್ರ ವಹಿಸಬೇಕೆಂದು ಸೂಚಿಸಲಾಗಿದೆ.

2. ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಯ ಮೇಲುಸ್ತುವಾರಿಯಲ್ಲಿ ಆಯಾ ಪ್ರದೇಶದಲ್ಲಿ ಸ್ಪೋಕನ್ ಟ್ಯುಟೋರಿಯಲ್ ಕುರಿತ ಜಾಗೃತಿ ಸಮಾವೇಶವೊಂದನ್ನು (Sensitizing Session) ಏರ್ಪಡಿಸತಕ್ಕದ್ದು.

3. ಕಾಲೇಜಿನ ಕಾರ್ಯಕ್ರಮ ಸಂಯೋಜಕರು ಕಾರ್ಯಕ್ರಮಕ್ಕೆ ನೋಂದಾಯಿಸಿಕೊಳ್ಳಲು http://www.spokentutorial.org/user/register ವೆಬ್‌ಸೈಟನ್ನು ಸಂಪರ್ಕಿಸಬೇಕು.

4. ನೋಂದಾಯಿತ ವಿದ್ಯಾರ್ಥಿಗಳು online/off line mode ನಲ್ಲಿ ಈ ಕೋರ್ಸುಗಳನ್ನು ಕಲಿಯಬಹುದು.

5. ಕಾರ್ಯಕ್ರಮ ಸಂಯೋಜಕರು ಕೋರ್ಸ್ ಮುಗಿದ ನಂತರ IIT ಮುಂಬೈನ ಸ್ಪೋಕನ್ ಟ್ಯುಟೋರಿಯಲ್ ಪ್ರಾಜೆಕ್ಟ್‌ನ online ಪರೀಕ್ಷೆಯನ್ನು ವಿದ್ಯಾರ್ಥಿಗಳು ತೆಗೆದುಕೊಳ್ಳುವಂತೆ ಉತ್ತೇಜಿಸುವುದು. ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ IIT ಮುಂಬೈ ವತಿಯಿಂದ ಪ್ರಮಾಣ ಪತ್ರವನ್ನು ನೀಡಲಾಗುವುದು.

6. ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಪಟ್ಟ ವರದಿಯನ್ನು (SC/ST/OBC & Others – Male/Female) ವರ್ಗಗಳ ಅಡಿಯಲ್ಲಿ ಕಾರ್ಯಕ್ರಮದ ಉಪಯೋಗ ಪಡೆದ ವಿದ್ಯಾರ್ಥಿಗಳ ಮಾಹಿತಿಯನ್ನು ಕೇಂದ್ರ ಕಛೇರಿಯ ವಿಶೇಷ ಯೋಜನೆ ವಿಭಾಗಕ್ಕೆ email ID - spokentutorial.dce@gmail.com ಗೆ ಕಳುಹಿಸತಕ್ಕದ್ದು.

➢ **ಕಾರ್ಯಕ್ರಮದ ಉದ್ದೇಶಿತ ಪ್ರಯೋಜನ:**

ಈ ಕಾರ್ಯಕ್ರಮವನ್ನು ರಾಜ್ಯಾದ್ಯಂತ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅನ್ವಯಿಸುವುದರಿಂದ ಹಿಂದುಳಿದ, ಅಲ್ಪಸಂಖ್ಯಾತ, ಮಹಿಳಾ ಮತ್ತು ಎಲ್ಲಾ ವಿದ್ಯಾರ್ಥಿಗಳಿಗೆ ಏಕರೂಪವಾಗಿ ಉತ್ತಮ ಗುಣಮಟ್ಟದ ಕಂಪ್ಯೂಟರ್ ಶಿಕ್ಷಣವನ್ನು ದೂರ ಸಂವಹನೆಯ ಮೂಲಕ ಒದಗಿಸಲಾಗುವುದು. ಇದರಿಂದಾಗಿ ರಾಜ್ಯಾದ್ಯಂತ ಪದವಿ ವಿದ್ಯಾರ್ಥಿಗಳ ಕಂಪ್ಯೂಟರ್ ಸಾಕ್ಷರತೆಯ ಮಟ್ಟವನ್ನು ಹೆಚ್ಚಿಸಲು ನೆರವಾಗುವುದು. ಈ ಕಾರ್ಯಕ್ರಮವು ವಿದ್ಯಾಥಿಗಳ ಉದ್ಯೋಗಾರ್ಹತೆಯ ಸಾಧ್ಯತೆಯನ್ನು ಹೆಚ್ಚಿಸುವುದು.

ಪ್ರಾದೇಶಿಕ ಜಂಟಿ ನಿರ್ದೇಶಕರು ತಮ್ಮ ವಲಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸೂಚಿಸಲಾಗಿದೆ.

(ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಕಾಲೇಜು ಶಿಕ್ಷಣ ನಿರ್ದೇಶಕರು.